# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಖಾತರಿ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಲು 2020-21ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2055-00-113-0-03-100 ರಡಿಯಲ್ಲಿ ಒದಗಿಸಿದ ರೂ.1.00 ಲಕ್ಷಗಳ ಅನುದಾನವನ್ನು ಪುಸ್ತಕ ಹೊಂದಾಣಿಕೆ ಮೂಲಕ ಪಾವತಿ ಮಾಡುವ ಬಗ್ಗೆ ಆದೇಶ.

**ಓದಲಾಗಿದೆ.** ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಬಿ5ಸಿ /03/ 2020-21, ದಿನಾಂಕ: 20.05.2020.

**ಪ್ರಸ್ತಾವನೆ:**

ಮೇಲೆ ಓದಲಾದ ಡಿಜಿ & ಐಜಿಪಿ ರವರು ಪತ್ರದಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ನಿಗಮವು. ಸರಕಾರದಿಂದ ಅನುಮೋದನೆ ಮಾಡಿದ ಯೋಜನೆಗಳನ್ನು ಅಂದರೆ ತ್ವರಿತ ವಸತಿ ಯೋಜನೆ-1 ಮತ್ತು 2 ಹಾಗೂ ವಸತಿಯೇತರ ಕಟ್ಟಡಗಳ ಯೋಜನೆಗಳನ್ನು (NRB Scheme) ಅನುಷ್ಠಾನಗೊಳಿಸಲು ಸರ್ಕಾರಿ ಖಾತರಿ ಆಧಾರದ ಮೇಲೆ ಹುಡ್ಕೋ ಸಂಸ್ಥೆಯಿಂದ ದೀರ್ಘಾವಧಿ ಸಾಲಗಳನ್ನು ಸರ್ಕಾರದ ಅನುಮೋದನೆಯೊಂದಿಗೆ ಪಡೆದಿರುತ್ತದೆ ಎಂದು ಪ್ರತಿ ವರ್ಷವು ಆರ್ಥಿಕ ವರ್ಷದ ಅಂತ್ಯದಲ್ಲಿ ಉಳಿಯುವ ಸಾಲದ ಮೊತ್ತದ ಮೇಲೆ ಶೇ.1 ರಷ್ಟು ಖಾತರಿ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಬೇಕಾಗಿರುವುದಾಗಿ ತಿಳಿಸಿರುತ್ತಾರೆ.

2020-21ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2055-00-113-0-03-100 ಧನಸಹಾಯ / ಪರಿಹಾರ (Financial Assistance/Relief) ರಡಿಯಲ್ಲಿ ಖಾತರಿ ಶುಲ್ಕಕ್ಕೆ ಒಟ್ಟು ರೂ.1.00 ಲಕ್ಷಗಳನ್ನು ಒದಗಿಸಲಾಗಿದು. ಸದರಿ ಅನುದಾನದಿಂದ 2020-21 ಸಾಲಿಗೆ ಪಾವತಿಸಬೇಕಾದ ಖಾತರಿ ಶುಲ್ಕ ರೂ.0.96 ಲಕ್ಷಗಳನ್ನು ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 129 ವೆಚ್ಚ-11/2015, ದಿನಾಂಕ 25.02.2016ರಲ್ಲಿ ಸೂಚಿಸಿರುವಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಹೆಚ್ ಡಿ 47 ಇಎಫ್ಎಸ್ 2019, ದಿನಾಂಕ 04.01.2020 ರಂತೆ ರೂ.0.96 ಲಕ್ಷಗಳನ್ನು ಖಾತರಿ ಕಮೀಷನ್ ನ ರಾಜಸ್ವ ಲೆಕ್ಕ ಶೀರ್ಷಿಕೆ "0075-00-108-0-01 Guarantee Fee" ಗೆ ಪುಸ್ತಕ ಹೊಂದಾಣಿಕೆ ಮಾಡಿಕೊಳ್ಳಲು (Book Adjustment) ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

-2

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 50 ಇಎಫ್‌ಎಸ್ 2020, ಬೆಂಗಳೂರು,**

**ದಿನಾಂಕ:29/ಜುಲೈ/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2055-00-113-0-03-100 ಧನಸಹಾಯ/ಪರಿಹಾರ (Financial Assistance/ Relief) ರಡಿಯಲ್ಲಿ ಖಾತರಿ ಶುಲ್ಕಕ್ಕೆ ಒದಗಿಸಲಾಗಿರುವ ರೂ.1.00 ಲಕ್ಷಗಳ ಅನುದಾನದಿಂದ 2020-21ನೇ ಸಾಲಿಗೆ ಪಾವತಿಸಬೇಕಾದ ಖಾತರಿ ಶುಲ್ಕ ರೂ.96,000/- ಗಳನ್ನು (ರೂಪಾಯಿ ತೊಂಬತ್ತಾರು ಸಾವಿರ ಮಾತ್ರ) ಖಾತರಿ ಕಮೀಷನ್ ನ ರಾಜಸ್ವ ಲೆಕ್ಕಶೀರ್ಷಿಕೆ ``0075-00-108-0-01 Guarantee Fee" ಗೆ ಪುಸ್ತಕ ಹೊಂದಾಣಿಕೆ ಮಾಡಿಕೊಳ್ಳಲು (Book Adjustment) ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 253 ವೆಚ್ಚ-11/2020, ದಿನಾಂಕ: 02/07/2020 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

29/7/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

29/7/2020
ಹೊರಡಿಸಿದೆ
ಒಳಾಡಳಿತ ಇಲಾಖೆ

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹಾರ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.

5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು.

6. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.

7. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.

8. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

9. ವಿಶೇಷಾಧಿಕಾರಿ (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ.

10. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ.

11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.